ಲಿಂಗಸಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿ ಕುರಿತು.

1482(2110)

ಶ್ರೀ ಅಮರೇಗೌಡ ಲಿಂಗಸಗೌಡ ಪಾಟೀಲ್(ಲಿಂಗಸಗೂರು): ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಲಿಂಗಸಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ, ಹಟ್ಟಿ, ಇಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ರದ್ದುಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಎ.ಬಿ.ಪಾಟೀಲ್(ಗಣಿ ಮತ್ತು ಭೂವಿಜ್ಞಾನ ಸಚಿವರು):

ಅ) ಹೌದು.

ಆ) ಕಂಪನಿಯ ಆರ್ಥಿಕ ಪರಿಸ್ಥಿತಿ ಬಹಳ ಕ್ಷೀಣಿಸಿರುವುದಾಗಿದೆ. ಆದುದರಿಂದ ತಾತ್ಕಾಲಿಕವಾಗಿ ಅನುಕಂಪದ ಆಧಾರದ ಮೇಲೆ ನೇಮಕಾತಿಯನ್ನು ನಿಲ್ಲಿಸಿಡಲಾಗಿದೆ. ಚಿನ್ನದ ಬೆಲೆಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಮತ್ತು ದೇಶದಲ್ಲಿ ಬಹಳ ಕುಸಿದಿರುವುದರಿಂದ, ಕಂಪನಿಯು ಕ್ಲಿಷ್ಟ ಆರ್ಥಿಕ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಆರ್ಥಿಕ ಪರಿಸ್ಥಿತಿ ಸುಧಾರಿಸಿದ ಮೇಲೆ, ಈ ವಿಷಯವನ್ನು ಪುನರ್ ಪರಿಶೀಲಿಸಲಾಗುವುದು.

SC/ST Hostels.

1483(2133)

Sri. S.Angara(Sulya): Will the minister for social welfare be pleased to state.

a) How many scheduled caste and scheduled tribe hostels are there in the state? What is the sanctioned strength of superintendents and cooks and of these how many posts are vacant?

b) How many SC/ST hostels are there in Dakshina kannada Dist. What is the sanctioned strength of superintendents and cooks,of these,how many posts are vacant.

Sri. K.M.Krishna Reddy(Minister for social welfare)

a) The number of scheduled caste/scheduled Tribe hostels hostel superintendents and cooks including vacant posts are detailed below:

Sl. No.	No. of hostels sanc tioned.	No.of hostel supdt. posts sanc tioned.	No. of cook posts posts sanc tioned	No of vacant posts hostel supdts.	cooks.
1) S.C.Hostels	1258	1258	2497	} 476	680
2) S.T.Hostels	54	54	96		

b) In Dakshina kannada District the No.of hostels,No.of hostel superintendents,and cooks and No.of vacant posts are detailed below.

	No.of hostels sanc tioned	hostel supdts.		Cooks		No. of vacant posts.	
		posts sanc tioned.	No.of staff work ing	posts sancd	No.of staff work ing	hostel supdts.	cooks
SC hostels	19	19	6	48	47	13	1
ST hostels	8	8	2	12	12	6	-

Government has accorded permission to fill up the posts of

wardens / hostel superintendents and the selection process is in progress.

ಬಿ.ಸಿ.ಎಂ. ವಿದ್ಯಾರ್ಥಿನಿಲಯಗಳು.

1484(2134)

ಶ್ರೀ ಎಸ್.ಅಂಗಾರ (ಸೂಳ್ಯ): ಮಾನ್ಯ ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸುಳ್ಯ ತಾಲ್ಲೂಕಿನಲ್ಲಿರುವ ಪ್ರೌಢ ಹಾಗೂ ಪದವಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಂದ ಬಿ.ಸಿ.ಎಂ. ವಿದ್ಯಾರ್ಥಿ ನಿಲಯಗಳಿಗೆ ಬೇಡಿಕೆ ಹಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿ.ಸಿ.ಎಂ. ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿ ನಿಲಯಗಳಲ್ಲಿ ಖಾಲಿ ಇರುವ ಮೇಲ್ವಿಚಾರಕರ ಹುದ್ದೆಗಳ ಸಂಖ್ಯೆ ಎಷ್ಟು? ಮತ್ತು ಖಾಲಿ ಇರುವ ಹುದ್ದೆಗಳನ್ನು ಎಂದು ಭರ್ತಿ ಮಾಡಲಾಗುವುದು?

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್(ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):

ಅ) ಹೌದು.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಸಿಎಂ ವಿದ್ಯಾರ್ಥಿ ನಿಲಯ ಹಾಗು ವಿದ್ಯಾರ್ಥಿನಿ ನಿಲಯಗಳಲ್ಲಿ 7 ಮೇಲ್ವಿಚಾರಕರ ಹುದ್ದೆಯು ಖಾಲಿ ಇರುತ್ತವೆ. ಈ ಹುದ್ದೆಗಳನ್ನು ತುಂಬಲು ಜರೂರು ಕ್ರಮ ಕೈಗೊಳ್ಳಲಾಗುವುದು.

ಹಾವೇರಿ ಜಿಲ್ಲೆಯಲ್ಲಿರುವ ಖಾಸಗಿ ವಿದ್ಯಾರ್ಥಿನಿಲಯಗಳು.

1485(2072)

ಶ್ರೀ ಉಜ್ಜಿನೇಶ್ವರ ಬಸವನಪ್ಪ ಬಣಕಾರ್(ಹಿರೇಕೆರೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹಾವೇರಿ ಜಿಲ್ಲೆಯಲ್ಲಿರುವ ಖಾಸಗಿ ವಿದ್ಯಾರ್ಥಿನಿಲಯಗಳ ಒಟ್ಟು ಸಂಖ್ಯೆ